ಜಲಭವನ
ನಂ..6, ಮೊದಲನೇ ಹಂತ, ಮೊದಲನೇ ಫೇಸ್,
ಬಿಟಿಎಂ ಲೇಔಟ್, ಬನ್ನೇರುಘಟ್ಟ, ರಸ್ತೆ,
ಬೆಂಗಳೂರು-5600029

ISO 9001:2008 NVT - QC
CERTIFICATE NO. 2790085

# ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು

ಸಂಖ್ಯೆ: ಕಜಮ/ಹೆಚ್‌ಆರ್‌ಡಿ–2/ವಾ.ಚಾ./ನೇ.ನೇ./ 2672 /2018–19 ದಿ: 25/2/2019

## ಅನಧಿಕೃತ ಟಿಪ್ಪಣಿ

ವಿಷಯ:– ಕನನೀಸ ಮತ್ತು ಒಚ ಮಂಡಳಿಯಲ್ಲಿ ಖಾಲಿ ಇರುವ 22 ವಾಹನ ಚಾಲಕರ ಹುದ್ದೆಗಳ ವಿವರಗಳನ್ನು ಮಂಡಳಿಯ ಜಾಲ ತಾಣದಲ್ಲಿ ಪ್ರಕಟಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯಲ್ಲಿ 22 ಖಾಲಿ ಇರುವ ವಾಹನ ಚಾಲಕರ ಹುದ್ದೆಗಳ ಬಗ್ಗೆ ಈಗಾಗಲೇ ಪ್ರಕಟಿಸಲಾಗಿರುವ ಅಧಿಸೂಚನೆಯ ಕ್ರಮ ಸಂಖ್ಯೆ:3ರಲ್ಲಿನ ಹಾಗೂ ಕ್ರಮ ಸಂಖ್ಯೆ:18ರಲ್ಲಿನ ಅಂಶಗಳಿಗೆ ತಿದ್ದುಪಡಿ ಮಾಡಲಾಗಿದ್ದು, ಹಾಗೂ ವಿಶೇಷ ಸೂಚನೆಯೊಂದಿಗೆ ತಿದ್ದುಪಡಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸುತ್ತಾ ಮಂಡಳಿಯ ಜಾಲ ತಾಣದಲ್ಲಿ (ವೆಬ್ ಸೈಟ್) ಪ್ರಕಟಿಸಲು ಕೋರಲಾಗಿದೆ.

ಕಾರ್ಯದರ್ಶಿ
ಕನನೀಸ ಮತ್ತು ಒಚ ಮಂಡಳಿ
ಬೆಂಗಳೂರು

ಗೆ,
ಮುಖ್ಯ ಅಭಿಯಂತರು (ಡಿ&ಎಂ)
ಕನನೀಸ ಮತ್ತು ಒಚ ಮಂಡಳಿ
ಬೆಂಗಳೂರು.

ANAB ISO 9001:2008 NVT - QC CERTIFICATE NO. 2790095

Tel.: 080 - 26539003 / 41106503
Fax: 080 - 26539206 / 26539296
Email : kuwsdbho@gmail.com

# ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
# Karnataka Urban Water Supply & Drainage Board

ನಂ. 5 ಮತ್ತು 6, ಜಲ ಭವನ, ಬಿ.ಟಿ.ಎಂ.ಲೇಔಟ್
1ನೇ ಘಟ್ಟ, 1ನೇ ಹಂತ, ಬನ್ನೇರುಘಟ್ಟ ಮುಖ್ಯರಸ್ತೆ
ಬೆಂಗಳೂರು 560029

**ಸಂಖ್ಯೆ:ಕಜಮ/ಹೆಚ್‌ಆರ್‌ಡಿ1/ಮಾನವ ಸಂಪನ್ಮೂಲ/ವಾಹನಚಾಲಕರ ನೇ.ನೇ./2672/2018-19/ ದಿನಾಂಕ:25.02.2019**

**: ಅಧಿಸೂಚನೆ :**

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ನೇರ ನೇಮಕಾತಿಗಾಗಿ ಕರೆದಿರುವ 22 ಚಾಲಕರ ಹುದ್ದೆಗೆ ಅರ್ಜಿಯನ್ನು ಹಾಕಲು ಬಯಸುವ ಅರ್ಜಿದಾರರು ನಿಗಧಿತ ಅರ್ಜಿಯ ನಮೂನೆಯನ್ನು ಮಂಡಳಿಯ ಜಾಲತಾಣ www.kuwsdb.org ರಲ್ಲಿ ಪಡೆಯಬಹುದು.

2. **ನೇಮಕಾತಿ ವಿಧಾನ:**

   ಅಭ್ಯರ್ಥಿಗಳ ಆಯ್ಕೆಯನ್ನು ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮಗಳು ಹಾಗೂ ಈ ಬಗ್ಗೆ ಕಾಲಕಾಲಕ್ಕೆ ಹೊರಡಿಸಿರುವ ತಿದ್ದುಪಡಿಗಳನ್ವಯ ಮಾಡಲಾಗುವುದು.

3 **ಕನಿಷ್ಟ ವಿದ್ಯಾರ್ಹತೆ:**

   ಅಭ್ಯರ್ಥಿಗಳು ಕನಿಷ್ಟ 7ನೇ ತರಗತಿಯವರೆಗೆ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು, ಹಾಗೂ ಲಘು ವಾಹನ ಚಾಲನ ಪರವಾನಗಿಯನ್ನು ಹೊಂದಿರತಕ್ಕದ್ದು. ಹಾಗೂ ಈ ಬಗ್ಗೆ ಕನಿಷ್ಠ 02 ವರ್ಷಗಳ ಅನುಭವವನ್ನು ಹೊಂದಿರತಕ್ಕದ್ದಾಗಿದ್ದು. ಅಭ್ಯರ್ಥಿಯು ಕನ್ನಡ / ಆಂಗ್ಲ ಭಾಷೆಯಲ್ಲಿ ಭಾಷಾ ಜ್ಞಾನವನ್ನು ಹೊಂದಿರತಕ್ಕದ್ದು.

4 **ವೇತನ ಶ್ರೇಣಿ:**

   ರೂ. 21400-500-22400-550-24600-600-27000-650-29600-750-32600-850-36000-950-39800-1100-42000

**5. ಹುದ್ದೆಯ ವರ್ಗೀಕರಣ:**

**(ಹೈದ್ರಬಾದ್- ಕರ್ನಾಟಕ ಪ್ರಾದೇಶಿಕ) ಸ್ಥಳೀಯ ವೃಂದ ಹುದ್ದೆಗಳು :**

| ವರ್ಗದ ಹೆಸರು | ಇತರೆ | ಗ್ರಾಮೀಣ ಅಭ್ಯರ್ಥಿಗಳು | ಕನ್ನಡ ಮಾಧ್ಯಮ | ಒಟ್ಟು |
|---|---|---|---|---|
| ಸಾಮಾನ್ಯ ವರ್ಗ | 2 | 1 | 1 | 4 |
| ಪರಿಶಿಷ್ಟ ಜಾತಿ | 1 | - | - | 1 |
| ಪರಿಶಿಷ್ಟ ಪಂಗಡ | - | - | - | - |
| ಪ್ರವರ್ಗ-2 ಎ | 1 | - | - | 1 |
| **ಒಟ್ಟು** | **4** | **1** | **1** | **6** |

| ರೆಸಿಡ್ಯೂಯಲ್ ಕೇಡರ್ ( ಮೂಲ ವೃಂದದ ಹುದ್ದೆಗಳು) | | | | |
|---|---|---|---|---|
| ವರ್ಗದ ಹೆಸರು | ಇತರೆ | ಗ್ರಾಮೀಣ ಅಭ್ಯರ್ಥಿಗಳು | ಕನ್ನಡ ಮಾಧ್ಯಮ | ಒಟ್ಟು |
| ಸಾಮಾನ್ಯ ವರ್ಗ | 3 | 2 | 2 | 7 |
| ಪರಿಶಿಷ್ಟ ಜಾತಿ | 1 | 1 | – | 2 |
| ಪರಿಶಿಷ್ಟ ಪಂಗಡ | 1 | – | – | 1 |
| ಪ್ರವರ್ಗ–I | 1 | – | – | 1 |
| ಪ್ರವರ್ಗ–II ಎ | 1 | 1 | – | 2 |
| ಪ್ರವರ್ಗ–II ಬಿ | 1 | – | – | 1 |
| ಪ್ರವರ್ಗ–III ಎ | 1 | – | – | 1 |
| ಪ್ರವರ್ಗ–II I ಬಿ | 1 | – | – | 1 |
| ಒಟ್ಟು | 10 | 4 | 2 | 16 |

6 **ಪರೀಕ್ಷಾರ್ಥ ಅವಧಿ:**

ನೇಮಕಗೊಂಡ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ 2 ವರ್ಷದ ಅವಧಿಗೆ ಒಳಪಟ್ಟಿರುತ್ತಾನೆ.

7 **ವಯೋಮಿತಿ:**

ಕರ್ನಾಟಕ ನಾಗರೀಕ ಸೇವೆ (ನೇರ ನೇಮಕಾತಿ) ನಿಯಮಗಳು 1977 ರ ನಿಯಮ 6(1)ರ ಪ್ರಕಾರ ಅಭ್ಯರ್ಥಿಯು ಕನಿಷ್ಟ 18 ವರ್ಷಗಳ ವಯೋಮಿತಿಯನ್ನು ಹೊಂದಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿಯನ್ನು ವರ್ಗಗಳ ಅನುಸಾರವಾಗಿ ಮೀರತಕ್ಕದ್ದಲ್ಲ.

ಎ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ರ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳ ವಯೋಮಿತಿ.

ಬಿ) ಪ್ರವರ್ಗ–IIಎ, IIಬಿ, IIIಎ, IIIಬಿ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಗರಿಷ್ಟ ವಯೋಮಿತಿ 38 ವರ್ಷಗಳು. ಹಾಗೂ

ಸಿ) ಇತರೆ ಸಾಮಾನ್ಯ ವರ್ಗದವರಿಗೆ ಗರಿಷ್ಠ ವಯೋಮಿತಿ 35 ವರ್ಷಗಳು

ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 6 (1)ರಂತೆ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಯ ಗರಿಷ್ಠ ವಯೋಮಿತಿಯನ್ನು ಈ ಕೆಳಕಂಡ ಪ್ರಕರಣಗಳಲ್ಲಿ ವ್ಯಾಪ್ತಿಗನುಸಾರವಾಗಿ ಹೆಚ್ಚಿಸಲು ಪರಿಗಣಿಸಲಾಗಿದೆ.

1. ಒಂದು ವೇಳೆ ಅಭ್ಯರ್ಥಿಯನ್ನು ಸೇವೆಯಲ್ಲಿದ್ದಲ್ಲಿ ಅಥವಾ ಕರ್ನಾಟಕ ಸರ್ಕಾರದಡಿಯಲ್ಲಿ ಹುದ್ದೆಯನ್ನು ಹೊಂದಿದ್ದಲ್ಲಿ ಅಥವಾ ಕರ್ನಾಟಕ ಸರ್ಕಾರದ/ ಕೇಂದ್ರ ಸರ್ಕಾರದ ಕಾಯ್ದೆಯಡಿಯಲ್ಲಿ ಸ್ಥಾಪಿಸಲಾದ ಕಾರ್ಪೋರೇಷನ್‌ಗಳಲ್ಲಿ ಅಥವಾ ಕರ್ನಾಟಕ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಕಾಯ್ದೆಯಡಿಯಲ್ಲಿ ಹಾಗೂ ಸರ್ಕಾರದ ಕಾಯ್ದೆಯಡಿಯಲ್ಲಿ ಮತ್ತು ಋಣಿಯಾಗಿರುವ ಅಥವಾ ಕರ್ನಾಟಕ ಸರ್ಕಾರದ ಅಧೀನದಲ್ಲಿ ಚಾಲ್ತಿಯಲ್ಲಿದ್ದು, ಸೇವೆ ಸಲ್ಲಿಸುತ್ತಿರುವ ಅಥವಾ ಕನಿಷ್ಠ 10 ವರ್ಷಗಳ ಸೇವೆಯನ್ನು ಸಲ್ಲಿಸುತ್ತಿದ್ದು ಇವೆರಡರಲ್ಲಿ ಯಾವುದು ಕಡಿಮೆಯೋ ಅದು, ಅರ್ಜಿ ಸಲ್ಲಿಸಲು ಅಂತಿಮ ದಿನಾಂಕದಂದು ಕನಿಷ್ಠ ಹಾಗೂ ಗರಿಷ್ಠ ವಯೋಮಿತಿ.

**ಅರ್ಜಿಯನ್ನು ಸಲ್ಲಿಸುವ ವಿಧಾನ:**

ಅರ್ಜಿಯನ್ನು ಆಫ್‌ಲೈನ್ ಮೂಲಕ ಸಲ್ಲಿಸಬಹುದಾಗಿರುತ್ತದೆ.

ಅರ್ಜಿಯ ನಮೂನೆಯನ್ನು ಜಾಲತಾಣ www.kuwsdb.org ಡೌನಲೋಡ್ ಮಾಡಿ ಪಡೆಯಬಹುದಾಗಿದ್ದು, ಭರ್ತಿಮಾಡಿ ಅರ್ಜಿಯ ಶುಲ್ಕ ಪಾವತಿಸಿರುವಲ್ಲಿ ಚಲನ್‌ನನ್ನು ಲಗತ್ತಿಸಿ ನೊಂದಣಿ ಸ್ವೀಕೃತಿ ಅಂಚೆ ಮೂಲಕ ಕಳುಹಿಸಬಹುದು.

ಮೇಲೆ ತಿಳಿಸಿರುವ ವಿಧಾನವನ್ನು ಹೊರತುಪಡಿಸಿ ಬೇರೆ ಯಾವುದೇ ವಿಧಾನದಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

8 **ಅರ್ಜಿಯ ಶುಲ್ಕ:**

-ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 ರ ವರ್ಗದ ಅರ್ಜಿದಾರರು ಅರ್ಜಿ ಶುಲ್ಕವಾಗಿ ರೂ.50/-ಗಳನ್ನು ಪಾವತಿಸತಕ್ಕದ್ದು.
-ಉಳಿದ ಪಂಗಡದ ಅರ್ಜಿದಾರರು ರೂ.250/-ಗಳನ್ನು ಅರ್ಜಿ ಶುಲ್ಕವಾಗಿ ಪಾವತಿಸತಕ್ಕದ್ದು.

**ಶುಲ್ಕವನ್ನು ಪಾವತಿಸುವ ವಿಧಾನ:**

- ಅಭ್ಯರ್ಥಿಗಳು ಶುಲ್ಕವನ್ನು ಈ ಕೆಳಕಂಡ ವಿಧಾನದ ಮೂಲಕ ಪಾವತಿಸಬಹುದು.
- ಕಾರ್ಪೋರೇಷನ್ ಬ್ಯಾಂಕ್ ಜಲಭವನ ಶಾಖೆ, ಬೆಂಗಳೂರು ಖಾತೆ ಸಂಖ್ಯೆ:520141001412287 ಕ್ಕೆ ಆರ್‌ಟಿಜಿಎಸ್ ಮೂಲಕ ಐಎಫ್‌ಎಸ್‌ಸಿ ಕೋಡ್ ಸಿಓಆರ್ ಪಿ 0000714 ಅಥವಾ ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ ಬೆಂಗಳೂರು ಇವರ ಹೆಸರಿನಲ್ಲಿ ಡಿಡಿ. ಪಡೆದು ಸಲ್ಲಿಸಬಹುದು.
- ಎಲ್ಲಾ ಅಭ್ಯರ್ಥಿಗಳು ಶುಲ್ಕ ಪಾವತಿಸಿದ ಬಗ್ಗೆ ಚಲನ್ ಅನ್ನು ದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.
- ಒಂದು ಬಾರಿ ಪಾವತಿಸಿದ ಅರ್ಜಿಯ ಶುಲ್ಕವನ್ನು ಹಿಂದಕ್ಕೆ ನೀಡತಕ್ಕದ್ದಲ್ಲ.

9 **ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳು :**

- 7ನೇ ತರಗತಿಯಲ್ಲಿ ಪಡೆದ ಅಂಕಗಳು - ಶೇ. 25 ರಷ್ಟು
- ವಾಹನ ಚಾಲನೆಯಲ್ಲಿ ಪಡೆದ ಅಂಕಗಳಲ್ಲಿ – ಶೇ.25 ರಷ್ಟು.
- ಸರ್ಕಾರದ ಸೇವೆಯಲ್ಲಿ/ ಮಾನ್ಯತೆ ಪಡೆದಿರತಕ್ಕ ಸರ್ಕಾರದ ಸೇವೆಯಡಿಯಲ್ಲಿ ಖ್ಯಾತಿ ಪಡೆದ ಸಂಸ್ಥೆಗಳಲ್ಲಿ ಸಲ್ಲಿಸಿರುವ ಹಿಂದಿನ ಸೇವೆಗೆ – ಶೇ 25ರಷ್ಟು
- ವ್ಯಕ್ತಿತ್ವದ ಪರೀಕ್ಷೆಯ – ಶೇ 25ರಷ್ಟು.

10 **ಮೀಸಲಾತಿಯನ್ನು ಬಯಸುವ ಅರ್ಜಿದಾರರು:**

ಎ.ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಕ್ಕೆ ಸೇರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಸಕ್ಷಮ ಪ್ರಾಧಿಕಾರದವರು ನಿಗಧಿತ ನಮೂನೆಯಲ್ಲಿ ಹೊರಡಿಸಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಬಿ. ಗ್ರಾಮೀಣ/ ಕನ್ನಡ ಮಾಧ್ಯಮಕ್ಕೆ ಅನ್ವಯಿಸುವ ಮೀಸಲಾತಿಯನ್ನು ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರಿಗಳು ನೀಡಿರುವ ಪ್ರಮಾಣಪತ್ರಗಳನ್ನು ಸಲ್ಲಿಸತಕ್ಕದ್ದು.

ಸಿ.ಹೆಚ್ಚಿನ ವಯೋಮಿತಿಗೆ ವಿನಾಯಿತಿ ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದವರು ಹೊರಡಿಸಿರುವ ಸೂಕ್ತ ಪ್ರಮಾಣಪತ್ರವನ್ನು ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಸಲ್ಲಿಸತಕ್ಕದ್ದು ಹಾಗೂ ಅದರ ಪ್ರತಿಯನ್ನು ಅರ್ಜಿ ಸಲ್ಲಿಸುವಾಗ ಸಲ್ಲಿಸತಕ್ಕದ್ದು.

ಡಿ. ಅರ್ಜಿದಾರರು ಅಥವಾ ಆಭ್ಯರ್ಥಿಯು ಭಾರತದ ಒಕ್ಕೂಟ / ಕರ್ನಾಟಕ ಸರ್ಕಾರ ಹಾಗೂ ಅಧೀನ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ. ಸಂಬಂಧಪಟ್ಟ ಪ್ರಾಧಿಕಾರಗಳಿಂದ ನಿರಾಪೇಕ್ಷೇಪಣಾ ಪ್ರಮಾಣ ಪತ್ರವನ್ನು ದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ಹಾಗೂ ಕೈಗೊಳ್ಳುವ ಪರೀಕ್ಷೆಗಳ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು .ವಯೋಮಿತಿಯ ವಿನಾಯಿತಿಯನ್ನು ಪಡೆಯಲು ಇಚ್ಛಿಸುವ ಅರ್ಜಿದಾರರು ಸದರಿ ಇಲಾಖೆಗಳಲ್ಲಿ ಸಲ್ಲಿಸಿರುವ ಸೇವಾವಧಿ ಬಗ್ಗೆ ನಮೂದಿಸಿರ ತಕ್ಕದ್ದು.

ಇ. ಮೇಲಿನ ಕ್ರಮಸಂಖ್ಯೆ:10 ಎ ಯಿಂದ ಡಿ ವರೆಗಿನ ಸೌಲಭ್ಯಗಳನ್ನು ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರಗಳನ್ನು ಅರ್ಜಿಸಲ್ಲಿಸಲು ನಿಗಧಿಪಡಿಸಿರುವ ದಿನಾಂಕದೊಳಗಾಗಿ ಹೊಂದಿರತಕ್ಕದ್ದು ಹಾಗೂ ಅರ್ಜಿಯೊಂದಿಗೆ ಪ್ರಮಾಣಪತ್ರಗಳ ಪ್ರತಿಯನ್ನು ಲಗತ್ತಿಸತಕ್ಕದ್ದು.

11 ಮೂಲ ದಾಖಲಾತಿಗಳ ಪರಿಶೀಲನಾ ಸಂದರ್ಭದಲ್ಲಿ ವಿದ್ಯಾರ್ಹತೆ, ಜನ್ಮದಿನಾಂಕ ಹಾಗೂ ಮೀಸಲಾತಿಯಲ್ಲಿ ಜಾತಿ, ಕನ್ನಡ ಮಾಧ್ಯಮ ಸೌಲಭ್ಯ ಪಡೆಯಲು ಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಿಗಳು ನೀಡಿರುವ ಮೂಲ ಪ್ರಮಾಣಪತ್ರಗಳನ್ನು ಒದಗಿಸತಕ್ಕದ್ದು.

12 ಹೈದ್ರಬಾದ್- ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಅಭ್ಯರ್ಥಿಗಳು ಜಿಲ್ಲಾ/ ತಾಲ್ಲೂಕು ಮಟ್ಟದ ಸಕ್ಷಮ ಪ್ರಾಧಿಕಾರಿಗಳು ನೀಡಿದ ಮೂಲ ಅರ್ಹ ಪ್ರಮಾಣ ಪತ್ರವನ್ನು **ಅನುಬಂಧ-ಎ** ನಲ್ಲಿ ಮತ್ತು ವಾಸಸ್ಥಳ ಪ್ರಮಾಣಪತ್ರಗಳನ್ನು **ಅನುಬಂಧ-ಬಿ** ನಲ್ಲಿ ಮೂಲ ದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ಹಾಗೂ ಪ್ರಮಾಣಪತ್ರಗಳ ಪ್ರತಿಯನ್ನು ಅರ್ಜಿಯ ಜೊತೆಗೆ ಲಗತ್ತಿಸಿ ಸಲ್ಲಿಸತಕ್ಕದ್ದು.

13 ಅಭ್ಯರ್ಥಿಗಳು ಓದುತ್ತಿರುವ ಶಾಲೆಯಿಂದ ನೀಡಲಾದ ನಡೆದ ಪ್ರಮಾಣ ಪತ್ರವನ್ನು ಹಾಗೂ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ನೀಡಿದ ನಡತೆ ಪ್ರಮಾಣ ಪತ್ರವನ್ನು ಅರ್ಜಿಯ ಜೊತೆಗೆ ಸಲ್ಲಿಸತಕ್ಕದ್ದು.

14 ಅಭ್ಯರ್ಥಿಗಳು ವಾಹನ ಚಾಲನೆ ಪರೀಕ್ಷೆಗೆ / ಸಂದರ್ಶನಕ್ಕೆ ತನ್ನ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

15 ಯಾವುದೇ ಒಬ್ಬ ಅಭ್ಯರ್ಥಿಗಳು ಬಾಹ್ಯ ಅಥವಾ ಯಾವುದೇ ರೀತಿಯ ಹಸ್ತಕ್ಷೇಪ ಮಾಡಿದ್ದೇ ಆದಲ್ಲಿ ಅಂತಹ ಅಭ್ಯರ್ಥಿಯ ಉಮೇದು ದಾಯಿತ್ವವನ್ನು ಅನರ್ಹಗೊಳಿಸಲಾಗುವುದು.

16 ಅಭ್ಯರ್ಥಿಗಳು ನೀಡಿರತಕ್ಕ ಯಾವುದೇ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಂತಹ ಅವನ / ಅವಳ ಉಮೇದು ದಾಯಿತ್ವವನ್ನು ರದ್ದುಪಡಿಸಲಾಗುವುದು ಹಾಗೂ ಅಂತಹ ಅಭ್ಯರ್ಥಿಗಳ ವಿರುದ್ಧ ಕಾನೂನು ಕ್ರಮವನ್ನು ಜರುಗಿಸಲಾಗುವುದು.

17 ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮೇಲೆ ನೀಡಲಾದ ಎಲ್ಲಾ ನಿರ್ದೇಶನಗಳನ್ನು ಅರ್ಜಿ ಸಲ್ಲಿಸುವ ಮುನ್ನ ನಿಗದಿಪಡಿಸಿದ ವಿದ್ಯಾರ್ಹತೆ ಬಗ್ಗೆ ವಯೋಮಿತಿ ಬಗ್ಗೆ ಅರ್ಜಿ ಶುಲ್ಕ ಹಾಗೂ ನೇಮಕಾತಿಯ ಮಾನದಂಡಗಳ ಹಾಗೂ ಇತರೆ ಮಾಹಿತಿಗಳನ್ನು ಎಚ್ಚರಿಕೆಯಿಂದ ಓದಿ ಕೊಳ್ಳುವುದು.

18 **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**

ಅರ್ಜಿಯನ್ನು ಸಲ್ಲಿಸುವ ಅವಧಿಯನ್ನು ದಿ:**11.03.2019**ರ ಸಂಜೆ **5:00** ಘಂಟೆಯ ವರೆಗೆ ವಿಸ್ತರಿಸಿ ಎಲ್ಲಾ ಅರ್ಜಿಗಳು ಈ ಅವಧಿ ಒಳಗೆ ಮೇಲೆ ತಿಳಿಸಿರುವ ವಿಳಾಸಕ್ಕೆ ಸಲ್ಲಿಸಬಹುದು. ವಿಳಂಬವಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಅಥವಾ ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ವಿಶೇಷ ಸೂಚನೆ:** ವಾಹನ ಚಾಲಕರ ಹುದ್ದೆಗೆ ಅರ್ಜಿ ಹಾಕಲು ಕನಿಷ್ಠ ವಿದ್ಯಾರ್ಹತೆಯನ್ನು ಪ್ರಕಟಣೆ ದಿನಾಂಕ:25.01.2019ರಂದು ಎಸ್‌ಎಸ್‌ಎಲ್‌ಸಿ ಪ್ರಕಟಿಸಿರುವುದನ್ನು ಮಾರ್ಪಡಿಸಿ 7ನೇ ತರಗತಿ ಎಂದು ತಿದ್ದುಪಡಿ ಮಾಡಿರುವುದರಿಂದ ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು 7ನೇ ತರಗತಿಯ ಅಂಕಪಟ್ಟಿ ಸಲ್ಲಿಸದೇ ಇದ್ದಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವಾದ: 11.03.2019ರೊಳಗೆ ತಮ್ಮ 7ನೇ ತರಗತಿಯ ಅಂಕಪಟ್ಟಿಯನ್ನು ಮೇಲೆ ತಿಳಿಸಿರುವ ವಿಳಾಸಕ್ಕೆ ಸಲ್ಲಿಸಬಹುದು ವಿಳಂಬವಾಗಿ ಸ್ವೀಕರಿಸಲಾದ ಅಂಕಪಟ್ಟಿಗಳನ್ನು ತಿರಸ್ಕಿಸಲಾಗುವುದು

**ವ್ಯವಸ್ಥಾಪಕ ನಿರ್ದೇಶಕರು**
ಕರ್ನಾಟಕ ನಗರ ನೀರು ಸರಬರಾಜು ಮತ್ತು
ಒಳಚರಂಡಿ ಮಂಡಳಿ,
ಬೆಂಗಳೂರು